# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 10-08-2022

## ಬೀದರ ನಗರ ಪೊಲೀಸ ಠಾಣೆ ಅಪರಾಧ ಸಂಖ್ಯೆ 37/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 09/08/2022 ರಂದು 16:30 ಗಂಟೆಗೆ ಶ್ರೀ ಪ್ರಭಾಕರ ಪಾಟೀಲ್ ಪಿ.ಎಸ್.ಐ (ಕಾಸು) ಬೀದರ ನÀಗರ ಪೊಲೀಸ ಠಾಣೆ ಠಾಣೆಯಲ್ಲಿ ಮಧ್ಯಾಹ್ನ 13:45 ಗಂಟೆ ಸುಮಾರಿಗೆ ಒಂದು ಖಚಿತ ಮಾಹಿತಿ ಬಂದಿದೆನೆಂದರೆ ಬೀದರ ನಗರ ಠಾಣಾ ವ್ಯಾಪ್ತಿಯಲ್ಲಿ ಬರುವ ತಾಜಲಾಪೂರ ಗ್ರಾಮದ ಹನುಮಾನ ಮಂದಿರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಿಂತು ಹೊಗಿ ಬರುವ ಜನರಿಗೆ ಕರೆದು ತನ್ನ ಹತ್ತಿರ ಮಟಕಾ ಜೂಜಾಟ ಆಡಿದರೆ 1/-ರೂ ಗೆ 90/-ರೂ ಕೂಡುತ್ತೇನೆ ಅಂತ ಕರೆದು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಬರೆದುಕೊಡುತ್ತಿದ್ದಾನೆ ಅಂತ ಖಚಿತ ಮಾಹಿತಿ ಬಂದ ಮೆರೆಗೆ ಸಿಬ್ಬಂದಿಯವರೊಂದಿಗೆ ಹೋಗಿ  ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿತನಿಗೆ ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು 1) ಸಂಜುಕುಮಾರ ತಂದೆ ಶಿವರಾಜ  ವಯ:42 ವರ್ಷ ಜಾ: ಲಿಂಗಾಯತ ಉ: ತರಕಾರಿ ವ್ಯಾಪಾರ  ಸಾ: ತಾಜಲಾಪೂರ ಅಂತ ತಿಳಿಸಿ ತನ್ನ ಹತ್ತಿರ ಮಟಕಾ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 660/-ರೂ ಮತ್ತು ಒಂದು ಬಾಲ ಪೆನ್ನು, ಮತ್ತು 5 ಮಟಕಾ ಚೀಟಿಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಬೀದರ ನಗರ ಪೊಲೀಸ ಠಾಣೆ ಅಪರಾಧ ಸಂಖ್ಯೆ 38/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 09/08/2022  ರಂದು 2015 ಗಂಟೆಗೆ ಶ್ರೀ ಪ್ರಭಾಕರ ಪಾಟೀಲ್ ಪಿ.ಎಸ್.ಐ (ಕಾಸು)  ಠಾಣೆಯಲ್ಲಿದ್ದಾಗ ಒಂದು ಖಚಿತ ಮಾಹಿತಿ ಬಂದಿದೆನೆಂದರೆ ಬೀದರ ನಗರ ಠಾಣಾ ವ್ಯಾಪ್ತಿಯಲ್ಲಿ ಬರುವ ತರಕಾರಿ ಮಾರ್ಕೇಟ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಇಬ್ಬರೂ ವ್ಯಕ್ತಿಗಳು ನಿಂತು ಹೊಗಿ ಬರುವ ಜನರಿಗೆ ಕರೆದು ತನ್ನ ಹತ್ತಿರ ಮಟಕಾ ಜೂಜಾಟ ಆಡಿದರೆ 1/-ರೂ ಗೆ 90/-ರೂ ಕೂಡುತ್ತೇವೆ. ಅಂತ ಕರೆದು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಬರೆದುಕೊಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೆರೆಗೆ ಸಿಬ್ಬಂದಿಯೊಂದಿಗೆ ಹೋಗಿ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿತರಿಗೆ ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತಮ್ಮ ಹೆಸರು 1) ಮೊಹ್ಮದ ಹಫೀಜ್ ಅಹ್ಮದ ತಂದೆ ಮೊಹ್ಮದ ಮನ್ಸೂರ ಅಹ್ಮದ ವಯ:30 ವರ್ಷ ಜಾ: ಮುಸ್ಲಿಂ ಉ:ತರಕಾರಿ ವ್ಯಾಪಾರ ಸಾ: ಸಿಂಗಾರ ಬಾಗ ಬೀದರ 2) ಮಿರ್ಜಾ ಶಕೀಲ್ ಬೇಗ್ ತಂದೆ ಮಿರ್ಜಾ ಮನ್ಸೂರ ಬೇಗ್ ವಯ:40 ವರ್ಷ ಜಾ:ಮುಸ್ಲಿಂ ಉ: ಡ್ರೈವರ ಸಾ:ಮನಿಯಾರ ತಾಲೀಮ ಬೀದರ ಅಂತ ತಿಳಿಸಿ ತಮ್ಮ ಹತ್ತಿರ ಮಟಕಾ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 3050/-ರೂ ಮತ್ತು ಒಂದು ಬಾಲ ಪೆನ್ನು, ಮತ್ತು 3 ಮಟಕಾ ಚೀಟಿಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಮಾರ್ಕೆಟ ಪೊಲೀಸ ಠಾಣೆ ಬೀದರ ಅಪರಾಧ ಸಂಖ್ಯೆ 49/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ 09-08-2022 ರಂದು 1215 ಗಂಟೆಗೆ ಶ್ರೀ ಶಿವಪ್ಪಾ ಮೇಟಿ ಪಿ.ಎಸ್.ಐ-1  ರವರು  ಠಾಣೆಯಲ್ಲಿದ್ದಾಗ ಬಾತ್ಮಿ ಬಂದಿದೆನಂದರೆ, ಬೀದರ ನಗರದ ಜನವಾಡಾ ರೋಡ ಸರಸ್ವತಿ ಶಾಲೆಯ ಕಾರ್ನರ ಹತ್ತಿರ  ಒಬ್ಬ ವ್ಯಕ್ತಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾನೆಂದು ಬಂದ ಬಾತ್ಮಿ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಅಲ್ಲೆ ರೋಡಿನ ಬದಿಯಲ್ಲಿ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಒಂದು ಕ್ಯಾರಿ ಬ್ಯಾಗ ಹಿಡಿದುಕೊಂಡು ನಿಂತ್ತಿದ್ದು ನೋಡಿ ಖಚಿತಪಡಿಸಿಕೊಂಡು  ದಾಳಿ ಮಾಡಿ ಅವನಿಗೆ ಅಲ್ಲೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವನು ತನ್ನ ಹೆಸರು ಚಂದ್ರಕಾಂತ ತಂದೆ ಹಣಮಂತಪ್ಪಾ ಹೆಡ್ಡೆ ವಯ 53 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಸುಲ್ತಾನಪೂರ ಗ್ರಾಮ ತಾ:ಜಿ;ಬೀದರ ಅಂತಾ ತಿಳಿಸಿರುತ್ತಾನೆ.  ಪಂಚರ ಸಮಕ್ಷಮ ಸದರಿ ಪ್ಲಾಸ್ಟಿಕ ಕ್ಯಾರಿ ಬಯಾಗ ಪರಿಶೀಲಿಸಿ ನೋಡಲಾಗಿ, ಇದರಲ್ಲಿ ಒರಿಜಿನಲ್ ಚೊಯಿಸ್ ವಿಸ್ಕಿ ಟೆಟ್ರಾ ಪ್ಯಾಕ 90 ಎಂ.ಎಲ್. ಒಟ್ಟು 48 ಇದ್ದು ಒಂದರ ಅ.ಕಿ.35/- ರೂ ಇದ್ದು ಒಟ್ಟು 1680/-ರೂ ಇರುತ್ತದೆ. ಜಪ್ತಿ ಮಾಡಿಕೊಂಡು ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 138/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ 09/08/2022 ರಂದು 1900 ಗಂಟೆಗೆ ಪಿ.ಎಸ್.ಐ. ರವರು ಪೊಲೀಸ ಠಾಣೆಯಲ್ಲಿದ್ದಾಗ ಶಿವಾನಿ ಧಾಬ ಬಳಿ ಒಬ್ಬ ವ್ಯಕ್ತಿಯು ಅನದಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಮಾಹಿತಿ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಘೇರಾವ ಹಾಕಿ ಅವನನ್ನು ಹಿಡಿದುಕೊಂಡು ಅವನ ಹತ್ತಿರ ಇದ್ದ ಕೈಚೀಲ ಪರಿಶೀಲಿಸಿ ನೋಡಲಾಗಿ ಅದರಲ್ಲಿ ಒರಿಜಿನಲ್ ಚಾಯಿಸ್ 90/ಎಮ್ಎಲ್ ಉಳ್ಳ 72 ಟೆಟ್ರಾ ಪ್ಯಾಕೇಟ್‌ಗಳು ಒಂದಕ್ಕೆ ಅ.ಕಿ 35.13/ರೂ. ಒಟ್ಟು (ಅ.ಕಿ. 2529/-ರೂ) ಬೆಲೆಬಾಳುವ ಸರಾಯಿ ಇರುತ್ತದೆ. ಜಪ್ತಿ ಮಾಡಿಕೊಂಡು ಸದರಿಯವನ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರು ಜೈಪಾಲರೆಡ್ಡಿ ತಂದೆ ಅಂಜಾರೆಡ್ಡಿ ಮುದ್ದಾ ವಯ 37 ವರ್ಷ ಜ್ಯಾತಿ ರೆಡ್ಡಿ ಉ/ ಕೂಲಿಕೆಲಸ ಸಾ/ ಜಾಂಪಾಡ ಗ್ರಾಮ ಅಂತ ತಿಳಿಸಿದನು. ಅವನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಬಸವಕಲ್ಯಾಣ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 93/2022 ಕಲಂ 454, 380 ಐಪಿಸಿ :-

ದಿನಾಂಕ 09/08/2022 ರಂದು 09:00 ಗಂಟೆಗೆ ಫಿರ್ಯಾದಿ ಅನೀಲಕುಮಾರ ತಂದೆ ವೈಜಿನಾಥ ಜೋಕಾರೆ ವಯ: 32 ವರ್ಷ ಜಾತಿ: ಲಿಂಗಾಯತ ಉ: ಮ್ಯಾನೇಜರ ಸಾ: ಕಾದೆಪೂರ ಹಾಜರಾಗಿ ಲಿಖಿತ ದೂರು ಸಲ್ಲಿಸಿದರ ಸಾರಾಂಶವೆನೆಂದರೆ ಇವರಿಗೆ ಇಬ್ಬರು ಗಂಡು ಮಕ್ಕಳಿದ್ದು ಇಬ್ಬರಲ್ಲಿ 1] ಸತೀಷಕುಮಾರ 2] ನಾನಿದ್ದು ಇಬ್ಬರು ಅಣ್ಣ ತಮ್ಮಂದಿರು ಈಗ ಸುಮಾರು 12 ವರ್ಷಗಳಿಂದ ದುಬೈಯಲ್ಲಿ ಬಂಗಾರದ ಅಂಗಡಿಯಲ್ಲಿ ಮ್ಯಾನೇಜರ ಅಂತಾ ಕೇಲಸ ಮಾಡುತಿದ್ದು ಈಗ ಒಂದು ತಿಂಗಳ ಹಿಂದೆ ಅಣ್ಣ ಸತೀಷಕುಮಾರ ಅನಾರೋಗ್ಯದಿಂದ ಮೃತಪಟ್ಟಿರುತ್ತಾರೆ. ಈ ಬಗ ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಐಶ್ವರ್ಯ, ತಾಯಿ ಜಗದೇವಿ, ತಂದೆ ವೈಜಿನಾಥ,ಅತ್ತಿಗೆ ಅಶ್ವೀನಿ ಅಕ್ಕ ಕರುಣಾ ಸೋದರಳಿಯ ಭಾಗ್ಯವಾನ,ಸೋದರಸೋಸೆ ಸೋನು ರವರು ಇರುತ್ತೆವೆ ನನ್ನ ಅಣ್ಣನ ಅತ್ತೆ ಮಾವನ ಮನೆ ಬಸವ ಕಲ್ಯಾಣ ಇರುವದರಿಂದ ನನ್ನ ಅತ್ತಿಗೆ ಮೊನ್ನೆ ರಾತ್ರಿ 8 ಗಂಟೆ ಸುಮಾರಿಗೆ ಬಸವಕಲ್ಯಾಣಕ್ಕೆ ಹೋದರು. ಹೆಂಡತಿಯ ಮೈಮೇಲಿನ ಬಂಗಾರದ ಆಭರಣಗಳು ಒಟ್ಟು 15 ತೋಲೆ ಮತ್ತು A೦ನ ಮೈಮೇಲಿನ ಬಂಗಾರದ ಆಭರಣಗಳು ಒಟ್ಟು 15 ತೋಲೆ ಹೀಗೆ ಒಟ್ಟು 30 ತೋಲೆ ಬಂಗಾರದ ಆಭರಣಗಳು ಇದ್ದಿದ್ದು ಮನೆಯಲ್ಲಿ ಕಬ್ಬೀಣದ ಅಲಮಾರಿಯ ಲಾಕರದಲ್ಲಿ ಇಟ್ಟಿದ್ದೇವು. ನಗದು ಹಣ 2 ಲಕ್ಷ ರೂಪಾಯಿ ಕೂಡಾ ಬಂಗಾರದ ಆಭರಣ ಇಟ್ಟ ಅಲಮಾರಿಯಲ್ಲೆ ಇಟ್ಟಿದ್ದೆವು. ಹಿಗೀರಲು ನಿನ್ನೆ ದಿನಾಂಕ 08/08/2022 ರಂದು ಮಧ್ಯಾಹ್ನ 12:30 ಗಂಟೆಗೆ ಹೆಂಡತಿ ಐಶ್ವರ್ಯ, ತಾಯಿ ಜಗದೇವಿ, ತಂದೆ ವೈಜಿನಾಥ ಅಕ್ಕ ಕರುಣಾ, ಸೋದರಳಿಯ ಭಾಗ್ಯವಾನ, ಸೋದರಸೋಸೆ ಸೋನು ರವರು ಕೂಡಿ ಅಣ್ಣ ಮೃತ ಪಟ್ಟಿರುವದರಿಂದ ಹಾರಕೂಡ ಮಠಕ್ಕೆ ಹೋಗಿ ಬರಬೆಕೆಂದು ಮನೆಗೆ ಮತ್ತು ಮನೆಯ ಗೇಟಿಗೆ ಬೀಗ ಹಾಕಿ ಹಾರಕೂಡಕ್ಕೆ ಹೋಗಿದ್ದೆವು ಹಾರಕೂಡ ಮುತ್ಯಾರವರ ದರ್ಶನ ಪಡೆದುಕೊಂಡು ಸಾಯಂಕಾಲ 6:30 ಪಿ.ಎಂ ಗಂಟೆಗೆ ಮನೆಗೆ ಬಂದು ಮನೇಯ ಗೇಟಿನ ಕೀಲಿ ತೆಗೆದು ಒಳಗೆ ಹೋಗಿ ನೋಡಲು ನನ್ನ ಬೆಡ್ಡ ರೂಮಿನ ಬಾಗೀಲ ಕೀಲಿ ಮುರಿದಿದ್ದು ಅಲ್ಲದೆ ರೂಮಿನಲ್ಲಿದ್ದ ಅಲಮಾರಿಯ ಕೀಲಿ ಮುರಿದು ಒಳಗಿನ ಲಾಕರಗಳ ಕೀಲಿ ಸಹ ಮುರಿದಿದ್ದು ಇರುವದರಿಂದ ಪರಿಶೀಲಿಸಿ ನೋಡಲು ಲಾಕರದಲ್ಲಿ ಇಟ್ಟಿದ ಬಂಗಾರದ ವಡವೆಗಳಲ್ಲಿ ನನ್ನ ಬಂಗಾರದ ಒಡವೇಗಳ ಪೈಕಿ 1] ಒಂದು 10 ಗ್ರಾಂ ಬಂಗಾರದ ಉಂಗುರ ಅ:ಕಿ: 40,000 ರೂ 2] ಒಂದು 10 ಗ್ರಾಂ ಬಂಗಾರದ ಉಂಗುರ ಅ:ಕಿ: 40,000 ರೂ, 3] ಒಂದು 9 ಗ್ರಾಂ ಬಂಗಾರದ ಉಂಗುರ ಅ:ಕಿ: 36,000 ರೂ, ನನ್ನ ಹೆಂಡತಿಯ ಬಂಗಾರದ ಒಡವೇಗಳ ಪೈಕಿ 4] ಒಂದು ಜೋತೆ 40 ಗ್ರಾಂ ಬಂಗಾರದ ಪಾಟಲಿಗಳು ಅ:ಕಿ: 1,60,000ರೂ 5] ಒಂದು 25 ಗ್ರಾಂ ಬಂಗಾರದ ನಕ್ಲೇಶ ಅ:ಕಿ: 1,00,000 ರೂ, 6] ಒಂದು 35 ಗ್ರಾಂ ಬಂಗಾರದ ಚಂದ್ರಹಾರಮ ಅ:ಕಿ: 1,40,000, 7] ಒಂದು 8 ಗ್ರಾಂ ಬಂಗಾರದ ನಾಣ್ಯ ಅ:ಕಿ: 32,000 ರೂ 8] ಒಂದು 8 ಗ್ರಾಂ ಬಂಗಾರದ ನಾಣ್ಯ ಅ:ಕಿ: 32,000 ರೂ, 9] ಒಂದು 2 ಗ್ರಾಂ ಬಂಗಾರದ ನಾಣ್ಯ ಅ:ಕಿ: 8,000 ರೂ, ಹಿಗೇ ಒಟ್ಟು 147 ಗ್ರಾಂ ಬಂಗಾರದ ಆಭರಣಗಳು ಅ:ಕಿ: 5,88,000 ರೂ ಬೆಲೆಯ ಬಂಗಾರದ ಆಭರಣಗಳು ಹಾಗೂ ನಗದು ಹಣ 2 ಲಕ್ಷ ರೂ ಎಲ್ಲಾ ಸೇರಿ ಒಟ್ಟು 7,88,000 ರೂಪಾಯಿದಷ್ಟು ದಿನಾಂಕ 08/08/2022 ರಂದು 12:30 ಗಂಟೆಯಿಂದ ಸಾಯಂಕಾಲ 6:30 ಪಿ.ಎಂ ಗಂಟೆ ಅವಧಿಯಲ್ಲಿ ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 129/2022 ಕಲಂ 457, 380 ಐಪಿಸಿ :-

ದಿನಾಂಕ: 09/08/2022 ರಂದು 1400 ಗಂಟೆಗೆ ಶ್ರೀ ಸತೀಷ್ ತಂದೆ ಶಿವರಾಜ ಪಾಟೀಲ್ ವಯಸ್ಸು 46 ವರ್ಷ ಜಾ; ಲಿಂಗಾಯತ ಉ; ವ್ಯಾಪಾರ ಗ್ರಾಮ ಸುಭಾಷ ಚೌಕ ಹತ್ತಿರ ಬಾಲಾಜಿ ನಗರ ಭಾಲ್ಕಿ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ, ಭಾಲ್ಕಿ ನಗರದಲ್ಲಿ ಭಾಲ್ಕಿ-ಬೀದರ ರೋಡಿಗೆ ಇರುವ ಪಾಪವಾ ಕ್ರಾಸ್ ಹತ್ತಿರ ಇವರ ನ್ಯೂ ಬಸವೇಶ್ವರ ಫರ್ಟಿಲೈಜರ ಅಂಗಡಿ ಮತ್ತು ಇವರ ತಮ್ಮ ಸಂತೋಷ ತಂದೆ ಶಿವರಾಜ ಪಾಟೀಲ್ ರವರ ಅಗ್ರೊ ಕೇಮಿಲ ಅಂಗಡಿ ಇರುತ್ತದೆ. ದಿನಾಂಕ: 08/08/2022 ರಂದು ಎಂದಿನಂತೆ 9 ಗಂಟೆಗೆ ಅಂಗಡಿಗೆ ಬಂದು ಅಂಗಡಿ ತೆರೆದಿರುತ್ತೇವೆ. ನನ್ನ ಅಂಗಡಿಯಲ್ಲಿ ಕೆಲಸ ಮಾಡುವ ಸುನೀಲ ಮತ್ತು ತಮ್ಮನ ಅಂಗಡಿಯಲ್ಲಿ ಕೆಲಸ ಮಾಡವ ದೂಳಪ್ಪಾ ಇವನು ಕೂಡಾ ಅಂಗಡಿಗೆ ಬಂದಿರುತ್ತಾರೆ. ವ್ಯಾಪಾರದಿಂದ ಬಂದ ಹಣ 91,670/- ರೂಪಾಯಿಯನ್ನು ಮತ್ತು ಫರ್ಟಿಲೈಜರ್ ಯನಿಯನ್ ಗೆ ಸಂಬಂಧಪಟ್ಟ ಹಣ 1,30,000/- ರೂಪಾಯಿಗಳು ಒಟ್ಟು 2,21,670/- ರೂಪಾಯಿಗಳನ್ನು ಕೌಂಟರ ದಲ್ಲಿ ಇಟ್ಟು ಕೀಲಿ ಹಾಕಿದ್ದು ಸಂತೋಷ ಇವನು ತನ್ನ ಅಂಗಡಿಯಲ್ಲಿ ವ್ಯಾಪಾರ ಮಾಡಿ ವ್ಯಾಪಾರದಿಂದ ಬಂದ ಹಣ 2,50,000/- ರೂಪಾಯಿಗಳನ್ನು ತನ್ನ ಅಂಗಡಿಯ ಕೌಂಟರ್ ದಲ್ಲಿ ಇಟ್ಟು ಕೀಲಿ ಹಾಕಿಕೊಂಡು ನಮ್ಮ ಅಂಗಡಿಯಲ್ಲಿ ಕೆಲಸ ಮಾಡುವ ಸುನೀಲ ಮತ್ತು ಧೂಳಪ್ಪಾ ಎಲ್ಲರೂ ಕೂಡಿ ರಾತ್ರಿ 8:30 ಗಂಟೆಗೆ ಅಂಗಡಿಯ ಕೀಲಿ ಹಾಕಿ ಮನೆಗೆ ಹೋಗಿರುತ್ತಾರೆ ಎಂದಿನಂತೆ ದಿನಾಂಕ: 09/08/2022 ರಂದು ಮುಂಜಾನೆ 9 ಗಂಟೆಯ ಸುಮಾರಿಗೆ ನಾನು ಮತ್ತು ನನ್ನ ತಮ್ಮ ಸಂತೋಷ ನಮ್ಮ ಅಂಗಡಿಗೆ ಹೋಗಿ ಅಂಗಡಿಯ ಶೇಟರ್ ತರೆದು ಒಳಗೆ ಹೋಗಿ ನೋಡಲಾಗಿ ಅಂಗಡಿಯಲ್ಲಿದ್ದ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಕೌಂಟರ್ ಹತ್ತಿರ ಹೋಗಿ ನೋಡಲು ಕೌಂಟರ್ ಚಾವಿ ಕೌಂಟರ್ ಮೇಲೆ ಬಿದಿದ್ದು ಕಂಡು ಬಂದಿದ್ದು, ಕೌಂಟರ್‌ನ ಡ್ರಾ ತೆಗೆದು ನೋಡಲಾಗಿ ಅದರಲ್ಲಿಟ್ಟಿದ್ದ ಹಣ 2,21,670/- ರೂ ಕಾಣಲಿಲ್ಲಾ. ನಂತರ ಮೇಲೆ ನೋಡಿದಾಗ ನಮ್ಮ ಅಂಗಡಿಯ ಪಿ.ಒ,ಪಿ ಸಿಲಿಂಗ್ ಒಡೆದು ತಗಡ ತೆಗೆದಿದ್ದು ತಮ್ಮನ ಕೌಂಟರ್‌ನ ಡ್ರಾ ತೆಗೆದು ನೋಡಲಾಗಿ ಅದರಲ್ಲಿಟ್ಟಿದ್ದ ಹಣ 2,50,000/- ರೂ ಕಾಣಲಿಲ್ಲಾ. ದಿನಾಂಕ: 08/08/2022 ರಂದು ರಾತ್ರಿ 8:30 ಗಂಟೆಯಿಂದ ಇಂದು ದಿನಾಂಕ: 09/08/2022 ರ ಮುಂಜಾನೆ 9 ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.